# 'ಸುಧಾ' ಜೊತೆಗಿನ ಓದುಗರ ಒಡನಾಟ

## ನನ್ನ ಬರವಣಿಗೆಗೆ ಸ್ಫೂರ್ತಿ

ವಾರಪತ್ರಿಕೆಯೆಂದರೆ 'ಸುಧಾ' ಅನ್ನುವಷ್ಟರ ಮಟ್ಟಿಗೆ ನಾನು ಫಿದಾ. ನನ್ನ ಅನೇಕ ಕಥೆ, ಹಾಸ್ಯ ಬರಹಗಳು, ಪ್ರವಾಸ ಕಥನಗಳು, ಲೇಖನಗಳು 'ಸುಧಾ'ದಲ್ಲಿ ಪ್ರಕಟಗೊಂಡಿವೆ. ನನ್ನ ಸಾಹಿತ್ಯ ಪಯಣದಲ್ಲಿ ಜೊತೆಗಾತಿಯಾಗಿ ನನ್ನನ್ನು ಹುರಿದುಂಬಿಸಿದ 'ಸುಧಾ'ಳನ್ನು ಮರೆಯುವುದೆಂತು?

—ಧರ್ಮಾನಂದ ಶಿರ್ವ, ಬೆಂಗಳೂರು

## ಮಕ್ಕಳ ಕಥೆಯಿಂದ ಶುರುವಾದ ನಂಟು

ನಾನು 8 ವರ್ಷದವಳಿದ್ದಾಗ ನಮ್ಮ ತಂದೆ 'ಸುಧಾ' ತರಿಸುತ್ತಿದ್ದರು. ಅದರಲ್ಲಿದ್ದ ಸಣ್ಣ ಕಥೆಯನ್ನು ಒಂದು ದಿನ ನನಗೆ ಓದಲು ಹೇಳಿದರು. ನಾನು ತಪ್ಪಿಲ್ಲದಂತೆ 'ಬುದ್ಧ ಹೇಳಿದ ಕಥೆಗಳು' ಓದಿದೆ. ಅಂದಿನಿಂದ ಶುರುವಾದ ನನ್ನ, 'ಸುಧಾ'ಳ ಬಂಧ ಇದುವರೆಗೂ ಹಾಗೇ ಇದೆ. ನನ್ನ ಬಾಲ್ಯದಿಂದ ಪ್ರೌಢಾವಸ್ಥೆ, ವಿವಾಹಾನಂತರ, ಈಗ ಇಳಿವಯಸ್ಸಿನಲ್ಲಿ ನನ್ನ ಜೊತೆಯಾಗಿ 'ಸುಧಾ' ನಿರಂತರವಾಗಿದ್ದಾಳೆ.

—ಡಿ. ಸುವರ್ಣ ತೆಗನೂರ್

## ಜ್ಞಾನ ವಿಕಾಸದ ಮಾದರಿ

ಅರವತ್ತರ ಹೊಸ್ತಿಲಲ್ಲಿರುವ 'ಸುಧಾ', ಓದುಗರ ಜ್ಞಾನ ವಿಕಾಸಕ್ಕೊಂದು ಮಾದರಿ. ಸುಮಾರು 15 ವರ್ಷಗಳಿಂದ ನಮ್ಮ ಕಚೇರಿಗೆ ಪ್ರತಿವಾರವೂ ಬರುವ ಪತ್ರಿಕೆಯು ತುಂಬಿ ತರುವ ಹೊಸತನದ ಬರಹಗಳು, ಸಚಿತ್ರ ಲೇಖನಗಳು ಎಲ್ಲವೂ ನನಗೆ ಅಚ್ಚುಮೆಚ್ಚು. ಸಾಂದರ್ಭಿಕವಾಗಿ ಬರುವ ಹೊಸತನದ ಹುಡುಕಾಟದ ಲೇಖನಗಳಂತೂ ಅದ್ಭುತ. 'ಸುಧಾ' ಪತ್ರಿಕೆಯು ಬಾಲ್ಯದಿಂದ ಅರವತ್ತರ ಮುಪ್ಪಿನವರೆಗೆ ಸಾಗುತ್ತಿದ್ದರೂ ಚಿರಯೌವನದ ಹುರುಪಿನ ಲೇಖನಗಳ ಮೂಲಕ ತನ್ನ ಗುಣಮಟ್ಟವನ್ನು ಕಾಯ್ದುಕೊಂಡೇ ಸಾಗುತ್ತಿರುವುದು ಕನ್ನಡ ಪತ್ರಿಕಾಲೋಕದ ಹಿರಿಮೆ.

—ಮಹಮ್ಮದ್, ಮೂಡುಬಿದಿರೆ

## ಮಧುರ ನೆನಪುಗಳ ಖಜಾನೆ

'ಸುಧಾ' ನನ್ನ ಜೀವನದ ಪ್ರೀತಿಯ ಅವಶ್ಯಕತೆಗಳಲ್ಲಿ ಒಂದಾಗಿಬಿಟ್ಟಿದೆ. ಒಮ್ಮೆ ಮಕ್ಕಳ ಪುಟದಲ್ಲಿ, 'ನೀವು ಮುಂದೆ ಏನಾಗಬಯಸುತ್ತೀರಿ ತಿಳಿಸಿ' ಎಂದು ಮಕ್ಕಳಿಗೆ ಕರೆ ನೀಡಿತ್ತು. ಅದರಲ್ಲಿ ನನ್ನ ಪತ್ರವೂ ಪ್ರಕಟವಾಗಿತ್ತು. 'ಬಳ್ಳಾರಿಯ ಮಧ್ವರಾಜನಿಗೆ ಸಿನಿಮಾ ನಟನಾಗಬೇಕೆಂಬ ಇಚ್ಛೆ' ಎಂಬುದನ್ನು ಓದಿ ಸಂತೋಷದಿಂದ ಕುಣಿದಾಡಿದ್ದೆ.

'ಸುಧಾ'ದಲ್ಲಿ ನನ್ನ ಹಲವು ಪತ್ರಗಳು ಪ್ರಕಟಗೊಂಡವು. ಕೆ.ಟಿ. ಗಟ್ಟಿ, ಟಿ.ಕೆ. ರಾಮರಾವ್, ಸುನಂದಾ ಬೆಳಗಾವಕರ್, ಕೃಷ್ಣಪ್ಪ... ಇಂಥ ಪ್ರಸಿದ್ಧ ಸಾಹಿತಿಗಳ ಕಥೆ, ಕಾದಂಬರಿ, ಪ್ರಬಂಧ, ಧಾರಾವಾಹಿಗಳನ್ನು ನಾನು ಎಂದೂ ಮರೆಯಲಾರೆ. ಇದು 'ಸುಧಾ' ಕನ್ನಡಿಗರಿಗೆ ನೀಡಿರುವ–ನೀಡುತ್ತಿರುವ ಕೊಡುಗೆ. ನಾನು ಕೂಡ ಬೋನಸ್ ಆಯುಷ್ಯದಲ್ಲಿ ಹಾಯಾಗಿದ್ದೇನೆ –'ಸುಧಾ' ಓದುತ್ತಾ.

—ಕೆ.ಎಂ. ಮಧ್ವರಾಯ, ಬೆಂಗಳೂರು

## ನನ್ನ ಒಡನಾಡಿ

ಇಷ್ಟು ಬೇಗ 'ಸುಧಾ'ಳಿಗೆ ಅರವತ್ತಾಯಿತೇ? ಏಕಿಲ್ಲ, ನನಗೂ ಅರವತ್ತಾಯಿತಲ್ಲ. ಸುದೀರ್ಘ ಅನುಭವದ ಮೂಸೆಯಲ್ಲಿ ಹದವರಿತು ಮಾಗಿ ಬೆರೆತು ಮೈದುಂಬಿ ಆಬಾಲವೃದ್ಧರಿಂದ ಎಲ್ಲರಿಗೂ ಅಚ್ಚುಮೆಚ್ಚಾಗಿರುವ 'ಸುಧಾ' ನಮ್ಮೆಲ್ಲರ ಹೆಮ್ಮೆ. ಖಂಡಿತ ನಮಗೆ ಓದುವ ಹುಚ್ಚು ಹಿಡಿಸಿದ್ದೇ 'ಸುಧಾ'. ಪತ್ರಿಕೆಯ ಪ್ರತಿ ಪುಟವೂ ಉಪಯುಕ್ತ ಮಾಹಿತಿಯನ್ನು ಒಳಗೊಂಡಿದೆ. ಸುಂದರ ಮುಖಪುಟಗಳಿಂದ ಆಕರ್ಷಕವಾಗಿದೆ. ನಮ್ಮ ತಾಯಿ, ದೇವಿ ಶಾರದೆ ಮುಖಪುಟಕ್ಕೆ ಕಟ್ಟು ಹಾಕಿಸಿ ಪೂಜೆಗಿಟ್ಟ ನೆನಪು.

—ಪಂಕಜ ನಾಗರಾಜು, ತುಮಕೂರು

## ನನ್ನ ಓದಿಗೆ ಪ್ರೇರಣೆ

'ಸುಧಾ' ಜೊತೆಜೊತೆಗೆ ನಾನೂ ಅರವತ್ತರ ಸಮೀಪಕ್ಕೆ ಬಂದಿದ್ದೇನೆ. ನನ್ನ ಬೌದ್ಧಿಕ ಬೆಳವಣಿಗೆಗೆ 'ಸುಧಾ' ಬಹಳ ಸಹಾಯ ಮಾಡಿದೆ. 'ಸಮಕ್ಷಮ' ವಿಭಾಗದಲ್ಲಿ ಬರುತ್ತಿದ್ದ ಸಾಹಿತಿಗಳ ಪರಿಚಯ ನನ್ನ ಓದಿಗೆ ಪ್ರೇರಣೆ ನೀಡಿವೆ.

ಹಲವು ಪುಟಗಳನ್ನು ಸಂಗ್ರಹಿಸಿ ಪುಸ್ತಕ ಮಾಡಿಟ್ಟಿರುವುದು ಸದಾ ಕಾಲಕ್ಕೂ ಸಂಜೀವಿನಿಯಾಗಿದೆ. ಶಿಕ್ಷಕರ ತರಬೇತಿ ಸಮಯದಲ್ಲಿ ಉಪಯುಕ್ತ ಪಾಠೋಪಕರಣವಾಗಿ ಹಲವರಿಂದ ಬಳಕೆಯಾಗಿದೆ. ನನ್ನ ಬರಹಗಳೂ ಪ್ರಕಟವಾಗಿವೆ. ರಸಪ್ರಶ್ನೆಯಲ್ಲಿ ಬಹುಮಾನ ಬಂದಾಗ ಸಂಭ್ರಮಿಸಿದ್ದಿದೆ.

—ಸುಬ್ಬಲಕ್ಷ್ಮಿ ಎಚ್.ಕೆ., ಕೋಲಾರ

## ನೋವು-ನಲಿವಿಗೆ ಜೊತೆಗಾತಿ

ನೆರೆಮನೆಯಿಂದ 'ಸುಧಾ' ಎರವಲು ತಂದೊಡನೆ, ಅದನ್ನು ಇಸಿದುಕೊಂಡು ಅಕ್ಕಂದಿರು ಓದುತ್ತಿದ್ದ ಪರಿಗೆ ಆಕರ್ಷಿತಳಾಗಿ ನಾನು 'ಸುಧಾ' ಅಭಿಮಾನಿಯಾದೆ. ಜಿ.ಕೆ.ಸತ್ಯರವರ ಸುಂದರ ಚಿತ್ರಗಳು, ರಮ್ಯ ಕಥೆಗಳು ಪರವಶಗೊಳಿಸುತ್ತಿದ್ದವು. ವಿವಾಹಾನಂತರ ನನ್ನ ಪತಿಗೆ ವರ್ಗಾವಣೆಯಾಗುವ ಊರಿನಲ್ಲೆಲ್ಲ, ಮೊದಲ ವಾರವೇ 'ಸುಧಾ' ಮನೆಗೆ ಬರುವಂತೆ ನೋಡಿಕೊಳ್ಳುತ್ತಿದ್ದೆ. ನನ್ನೆಲ್ಲ ನೋವು ನಲಿವುಗಳಲ್ಲಿ ಗೆಳತಿಯಂತೆ ಬದುಕನ್ನು ಸಹ್ಯ ಮಾಡಿದವಳು ಈ ನನ್ನ 'ಸುಧಾ'. ನನ್ನ ಚಿಕ್ಕ ಬರಹಗಳು ಪ್ರಕಟವಾಗಿ, ನನ್ನನ್ನು ಬರಹಗಾರ್ತಿಯಾಗಿ ಮಾಡಿದಳು. ಅರವತ್ತು ತುಂಬಿ ಹಿರಿಯ ನಾಗರಿಕಳಾದಳೂ ನಮ್ಮ ಕಣ್ಣಿಗೆ ಎಂದಿಗೂ ಚಿರಯೌವನೆ.

—ಕೆ. ಕೃಷ್ಣಕುಮಾರಿ, ಬೆಂಗಳೂರು

## ಸ್ವೀಟ್ 60

ಶಾಲಾ ದಿನಗಳಲ್ಲಿ ನಮ್ಮೂರಿನ ಗ್ರಂಥಾಲಯದಲ್ಲಿ 'ಸುಧಾ' ಓದುವ ಗೀಳು ನನ್ನದು. ಪ್ರತಿವಾರ 'ಸುಧಾ' ಓದಲಿಲ್ಲವೆಂದರೆ ಏನೋ ಕಳೆದುಕೊಂಡ ಭಾವ. ಪತ್ರಿಕೆಯಲ್ಲಿ ಬರುವ ನೀವು ಕೇಳಿದಿರಿ, ಕಥಾವಿಭಾಗ, ವಿಜ್ಞಾನ ಪ್ರಪಂಚ, ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಿನ ಹೆಸರಾಂತ ಕವಿಗಳು, ವಿಜ್ಞಾನಿಗಳು, ಲೇಖಕ ಲೇಖಕಿಯರು ಹಾಗೂ ಸಾಧಕರ ಫೋಟೊ ಸಹಿತ ಪರಿಚಯ ಪುಟಗಳನ್ನು ಸಂಗ್ರಹಿಸಿ ಭದ್ರವಾಗಿ ಪುಸ್ತಕ ರೂಪದಲ್ಲಿ ಮನೆಯಲ್ಲಿ ಸಂಗ್ರಹಿಸಿಡುವ ಕಾರ್ಯ ಅಭ್ಯಾಸವಾಗಿಬಿಟ್ಟಿತ್ತು. ಈಗಲೂ ತಾಂತ್ರಿಕ, ವೈಜ್ಞಾನಿಕ, ಸಾಮಾಜಿಕ ಜಾಲತಾಣ, ಪ್ರಚಲಿತ ವಿದ್ಯಮಾನಗಳ ಬಗ್ಗೆ ನವನವೀನ ಅಂಕಣಗಳಿಂದ ಕಂಗೊಳಿಸುತ್ತಿದೆ. 'ಸುಧಾ' ಸದಾ ಹೊಸತನ್ನು ತರುತ್ತಾ ಸ್ವೀಟ್ 60ಯಿಂದ ಸಾರ್ಥಕ 'ಸೆಂಚುರಿ'ಯತ್ತ ಸಾಗಲಿ ಎಂದು ಹಾರೈಸುತ್ತೇನೆ.

—ಎಸ್. ಈಶಣ್ಣ, ಹೂವಿನ ಹಡಗಲಿ

## 'ಸುಧಾ'ಗೆ ವಂದನೆ

'ಸುಧಾ' ಓದುವ ಅಭ್ಯಾಸ ಮಾಡಿಸಿದ್ದು ನನ್ನ ತವರು. ಮೊದಲನೇ ಪತ್ರಿಕೆಯಿಂದ ಪ್ರಾರಂಭವಾದ ಈ ಪಯಣ ಅತ್ತೆ ಮನೆಯಲ್ಲೂ ಮುಂದುವರಿಯಿತು. ನನ್ನ ಪತಿ ಮಾತೃಭಾಷೆ ತೆಲುಗು ಆದರೂ ನನಗಾಗಿ ಇಲ್ಲಿಯವರೆಗೂ ಒಂದೂ ಸಂಚಿಕೆಯನ್ನು ತಪ್ಪಿಸದೆ ನನ್ನ ಹವ್ಯಾಸ ಮುಂದುವರೆಸಲು ಪ್ರೋತ್ಸಾಹ ನೀಡಿದ್ದಾರೆ. ನನ್ನ ವೈವಿಧ್ಯಮಯ ಅಡುಗೆ ಲೇಖನಗಳನ್ನು ಪ್ರಕಟಿಸಿದಾಗ, ನನ್ನ ಹೆಸರು ನೋಡಿ ತುಂಬಾ ಸಂತಸಪಟ್ಟಿದ್ದೇನೆ.

—ಲಕ್ಷ್ಮಿ ಮೂರ್ತಿ, ಬೆಂಗಳೂರು